**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 09-06-1969.**

(ओम शान्ति, बापदादा. अव्यक्त मुरली 09-06-1969

***ಸುಸ್ತಿನ ಮಧುರ ರೂಪ – ಆಲಸ್ಯ*** (सुस्ती का मीठा रूप – आलस्य).

ಎಲ್ಲರೂ ವ್ಯಕ್ತದಲ್ಲಿದ್ದರೂ ಅವ್ಯಕ್ತ ಸ್ಥಿತಿಯಲ್ಲಿರುವಿರಾ? ಅವ್ಯಕ್ತ ಸ್ಥಿತಿಯೆಂದು ಯಾವುದಕ್ಕೆ ಹೇಳಲಾಗುತ್ತದೆಯೆಂದು ತಿಳಿದಿದೆಯೇ? ಮೊದಲು ಅವ್ಯಕ್ತ ಸ್ಥಿತಿಯ ಅರಿವು ನಂತರ ಅದರ ಪರಿಶೀಲನೆ ಈ ಎರಡು ಮಾತುಗಳ ಜ್ಞಾನವಿದೆಯೇ? ಅವ್ಯಕ್ತ ಸ್ಥಿತಿಯೆಂದು ಯಾವುದನ್ನು ಹೇಳಲಾಗುತ್ತದೆ? (ವ್ಯಕ್ತ ಭಾವನೆ ಇಲ್ಲದಿರುವುದಕ್ಕೆ) ವ್ಯಕ್ತದಲ್ಲಿ ಕಾರ್ಯ ಮಾಡುತ್ತಾ ವ್ಯಕ್ತದ ಭಾವನೆ ಹೇಗೆ ಇರುವುದಿಲ್ಲ? ಇಂದು ವ್ಯಕ್ತದಲ್ಲಿರುತ್ತ ಅವ್ಯಕ್ತ ಸ್ಥಿತಿಯಲ್ಲಿರುವ ಅನುಭವ ಎಷ್ಟಾಗುತ್ತದೆ ಎಂದು ಎಲ್ಲರನ್ನು ಕೇಳಬೇಕಾಗಿದೆ. ಅವ್ಯಕ್ತ ಸ್ಥಿತಿಯಲ್ಲಿ ಅತೀ ಹೆಚ್ಚೆಂದರೆ ಎಷ್ಟು ಸಮಯವಿರುತ್ತೀರಿ? ಹೆಚ್ಚೆಂದರೆ ಎಷ್ಟು ಸಮಯವಿರಬೇಕು ಗೊತ್ತಾ? (ಎಂಟು ಗಂಟೆ) ಸಂಪೂರ್ಣ ಸ್ಥಿತಿಯ ಲೆಕ್ಕದಂತೆ ಎಂಟು ಗಂಟೆಯೂ ಅತೀ ಕಡಿಮೆಯಾಗಿದೆ. ತಮ್ಮ ವರ್ತಮಾನ ಪುರುಷಾರ್ಥದ ಲೆಕ್ಕದಂತೆ ಎಂಟು ಗಂಟೆ ಹೆಚ್ಚೇ? (ಯಾರೂ ಕೈ ಎತ್ತಲಿಲ್ಲ). ಯಾರು ಆರು ಗಂಟೆಯವರೆಗೆ ತಲುಪಿದ್ದೀರಿ ಅವರು ಕೈ ಎತ್ತಿ. (ಯಾರೂ ಕೈ ಎತ್ತಲಿಲ್ಲ). ನಾಲ್ಕು ಗಂಟೆಯವರೆಗೆ ತಲುಪಿರುವವರು ಕೈ ಎತ್ತಿ. (ಕೆಲವರು ನಾಲ್ಕು ಗಂಟೆ, ಕೆಲವರು ಎರಡು ಗಂಟೆಗೆ ಕೈ ಎತ್ತಿದರು) ಈ ಫಲಿತಾಂಶದ ಲೆಕ್ಕದಂತೆ ಪುರುಷಾರ್ಥದ ಸಮಯ ಎಷ್ಟಿರಬೇಕು? ಕೋರ್ಸ್ ಪೂರ್ಣವಾಯಿತು. ಪುನರಾವರ್ತನೆಯ ಕೋರ್ಸ್ ಆಗುತ್ತಿದೆ. ಆದರೂ ಬಹುಸಂಖ್ಯಾತರ ಈ ಫಲಿತಾಂಶಕ್ಕೆ ಕಾರಣವೇನು? ಎಲ್ಲರೂ ಪುರುಷಾರ್ಥವನ್ನೂ ಮಾಡುತ್ತಿರುವಿರಿ, ಉತ್ಸಾಹವೂ ಇದೆ, ಉದ್ದೇಶವೂ ಇದೆ. ಆದರೂ ಏಕಾಗುವುದಿಲ್ಲ? (ಗಮನ ಕಡಿಮೆ) ಯಾವ ಮಾತಿನ ಕಡೆಗೆ ಗಮನ ಕಡಿಮೆಯಿದೆ? ಯೋಗ್ಯರಾಗಬೇಕು, ಸಮೀಪದಲ್ಲಿರಬೇಕು ಎಂಬ ಗಮನ ಎಲ್ಲರಿಗೂ ಇದೆ. ಆದರೆ ಅವ್ಯಕ್ತ ಸ್ಥಿತಿ ಕಡಿಮೆಯಿರಲು ಮುಖ್ಯ ಯಾವ ಎಚ್ಚರಿಕೆ ಕಡಿಮೆಯಿದೆ? ಇಲ್ಲಿ ಎಲ್ಲರೂ ಪುರುಷಾರ್ಥಿಗಳೇ ಕುಳಿತುಕೊಂಡಿದ್ದೀರಿ. ನಾನು ಪುರುಷಾರ್ಥಿಯಲ್ಲ ಎಂಬುವವರು ಯಾರಾದರೂ ಇದ್ದೀರಾ? ಹಾಗಾದರೆ ಕೊರತೆಯೇಕೆ? ಅಂತರ್ಮುಖಿಯಾಗಿರಲು ಇಚ್ಛಿಸಿದರೂ ಏಕೆ ಇರಲಾಗುತ್ತಿಲ್ಲ? ಬಹಿರ್ಮುಖತೆಯಲ್ಲಿ ಏಕೆ ಬರುತ್ತೀರಿ? ಎಲ್ಲರೂ ಜ್ಞಾನಿ ಆತ್ಮಗಳೂ ಆಗಿದ್ದೀರಿ, ಜ್ಞಾನಿ, ಆತ್ಮಗಳು ತಿಳುವಳಿಕೆಯುಳ್ಳವರಾಗಿರುತ್ತಾರೆ ಹಾಗಾದರೆ ತಿಳಿಗೇಡಿತನವೇಕೆ? ತಿಳುವಳಿಕೆ ಬಂದಿದೆ, ಅರಿವಿನ ಈ ಕೋರ್ಸ್ ಪೂರ್ಣವಾಗಿದೆ. ಕೋರ್ಸ್ ಮುಗಿದಿದೆಯೆಂದರೆ ತಿಳುವಳಿಕೆಯುಳ್ಳವರಾಗಿದ್ದೀರಿ. ಆದರೂ ಏಕೆ ತಿಳಿಗೇಡಿಗಳಾಗುತ್ತೀರಿ? .

**ಕೆಲವರಲ್ಲಿ ಸುಸ್ತು ಎಂದು ಕರೆಯಲ್ಪಡುವ ಹುಡುಗಾಟಿಕೆ ಮುಖ್ಯ ಕಾರಣವೆಂದು ಕಂಡುಬರುತ್ತದೆ. ಸುಸ್ತಿನ ಮಧುರ ರೂಪವಾಗಿದೆ ಆಲಸ್ಯ. ಆಲಸ್ಯವೂ ಅನೇಕ ಪ್ರಕಾರದ್ದಾಗಿದೆ. ಬಹುಸಂಖ್ಯಾತರಲ್ಲಿ ಒಂದಿಲ್ಲೊಂದು ರೀತಿಯ ಆಲಸ್ಯ ಮತ್ತು ಹುಡುಗಾಟಿಕೆ ಬಂದಿದೆ** . ಇಚ್ಛೆಯಿದೆ, ಪುರುಷಾರ್ಥವೂ ಇದೆ. ಆದರೆ ಹುಡುಗಾಟಿಕೆಯಿಂದ ಯಾವ ತರಹದ ಪುರುಷಾರ್ಥ ಮಾಡಬೇಕೋ ಅದನ್ನು ಮಾಡಲಾಗುತ್ತಿಲ್ಲ. ಬುದ್ಧಿಯಲ್ಲಿ ಹೆಚ್ಚು ಜ್ಞಾನ ಬಂದಾಗ ಹೆಚ್ಚು ಹುಡುಗಾಟಿಕೆಯಾಗುತ್ತದೆ. ಆದಾಗ್ಯೂ ಯಾರು ತಮ್ಮನ್ನು ತಾವು ಕಡಿಮೆ ತಿಳುವಳಿಕೆಯುಳ್ಳವರು ಎಂದು ತಿಳಿದುಕೊಳ್ಳುತ್ತಾರೋ ಅವರು ತೀವ್ರ ಪುರುಷಾರ್ಥವನ್ನು ಮಾಡುತ್ತಿದ್ದಾರೆ. ಆದರೆ ಯಾರು ತಮ್ಮನ್ನು ತಾವು ಹೆಚ್ಚು ಬುದ್ಧಿವಂತರು ಎಂದು ತಿಳಿದುಕೊಂಡಿದ್ದಾರೆಯೋ ಅವರು ಹೆಚ್ಚು ಎಚ್ಚರಿಕೆಯಿಲ್ಲದವರಾಗಿದ್ದಾರೆ. ಹೇಗೆ ಮೊದಲು ಹೀಗೆ ಆಗಿ ತೋರಿಸುತ್ತವೆ. ಹೀಗೆ ಮಾಡಿ ತೋರಿಸುತ್ತೇವೆ ಎಂದು ಮರುಷಾರ್ಥದ ಚಡಪಡಿಕೆಯಿತ್ತು ಆ ಸೆಳೆತ ಈಗ ಸಮಾಪ್ತಿಯಾಗಿದೆ. ತೃಪ್ತಿಯಾಗಿದೆ, ತಮ್ಮಿಂದ ತಾವೇ ತೃಪ್ತರಾಗಿದ್ದಾರೆ. ಜ್ಞಾನ ತಿಳಿಯಿತು, ಸೇವೆ ಮಾಡುತ್ತಿದ್ದೇವೆ, ನಡೆಯುತ್ತಿದ್ದೇವೆ. ಈ ರೀತಿ ತೃಪ್ತ ಆತ್ಮರಾಗುವುದು ಸರಿಯಲ್ಲ, ಪುರುಷಾರ್ಥದ ಚಡಪಡಿಕೆಯಿರಬೇಕು. ಹೇಗೆ ಬಂಧನದಲ್ಲಿರುವವರು ಚಡಪಡಿಸುತ್ತಾರೆ, ಆದ್ದರಿಂದ ತೀವ್ರ ಪುರುಷಾರ್ಥವನ್ನು ಮಾಡುತ್ತಾರೆ. ಯಾರು ಬಂಧನದಲ್ಲಿಲ್ಲವೋ ಅವರು ತೃಪ್ತರಾಗಿರುವುದರಿಂದ ಹುಡುಗಾಟಿಕೆಯಲ್ಲಿ

ಬರುತ್ತಾರೆ. ಅನೇಕ ಪುರುಷಾರ್ಥಿಗಳ ಫಲಿತಾಂಶ ಈ ರೀತಿ ಕಂಡುಬರುತ್ತದೆ. **ಯಾವಾಗಲೂ ನಾವು ನಂಬರವನ್ ಪುರುಷಾರ್ಥಿಯಾಗುತ್ತಿದ್ದೇವೆ ಆದರೆ ಇನ್ನೂ ಪೂರ್ಣ ಆಗಿಲ್ಲ ಎಂದುತಿಳಿದುಕೊಳ್ಳಿ.**

ಮೂರು ಕಾಲಗಳ ಜ್ಞಾನ ಬುದ್ಧಿಯಲ್ಲಿ ಬರುವುದರಿಂದ ತಮ್ಮನ್ನು ತಾವು ಹೆಚ್ಚು ಬುದ್ಧಿವಂತರು ಎಂದು ತಿಳಿದುಕೊಳ್ಳುತ್ತಾರೆ. ಎಲ್ಲಿ ಬಾಲಕರಾಗಬೇಕೋ ಅಲ್ಲಿ ಮಾಲಿಕರಾಗುತ್ತೀರಿ ಮತ್ತು ಎಲ್ಲಿ ಮಾಲಿಕರಾಗಬೇಕೋ ಅಲ್ಲಿ ಬಾಲಕರಾಗುತ್ತೀರಿ ಎಂದು ಮೊದಲೂ ಹೇಳಿದ್ದೆವು. ಈಗ ಮಕ್ಕಳ ರೂಪದಲ್ಲಿ ಮಧುರ ಪುರುಷಾರ್ಥವನ್ನಂತೂ ಮಾಡುತ್ತಿದ್ದೀರಿ. ರಾಜ್ಯದ ಅಧಿಕಾರಿಗಳಾಗಿದ್ದೀರಿ. ತಿಲಕವೂ ಬಂತು ಆದರೆ ಈ ಸಡಿಲ ಮತ್ತು ಮಧುರ ಪುರುಷಾರ್ಥ ಇನ್ನು ನಡೆಯುವುದಿಲ್ಲ. ಎಷ್ಟು ಶಕ್ತಿರೂಪದಲ್ಲಿ ಸ್ಥಿತರಾಗುತ್ತೀರೊ ಅಷ್ಟು ಪುರುಷಾರ್ಥವೂ ಶಕ್ತಿಶಾಲಿಯಾಗುವುದು. ಈಗ ಪುರುಷಾರ್ಥ ಶಕ್ತಿಶಾಲಿಯಾಗಿಲ್ಲ, ಸಡಿಲವಾಗಿದೆ. ಎಲ್ಲರೂ ಪುರುಷಾರ್ಥಿಗಳಾಗಿದ್ದೀರಿ ಆದರೆ ಶಕ್ತಿಶಾಲಿ ಪುರುಷಾರ್ಥಕ್ಕಾಗಿ ಇನ್ನೂ ಪುರುಷಾರ್ಥದಲ್ಲಿ ಶಕ್ತಿ ತುಂಬಿಲ್ಲ. ಬೆಳಿಗ್ಗೆ ಏಳುತ್ತಲೇ ಪುರುಷಾರ್ಥದಲ್ಲಿ ಶಕ್ತಿ ತುಂಬಿಸಿಕೊಳ್ಳಲು ಯಾವುದಾದರೊಂದು ವಿಚಾರವನ್ನು ಮುಂದಿಟ್ಟುಕೊಳ್ಳಿ. ಅಮೃತ ವೇಳೆ ಹೇಗೆ ಆತ್ಮಿಕ ಸಂಭಾಷಣೆ ಮಾಡುತ್ತೀರೋ ಅದೇ ರೀತಿ ತಮ್ಮ ಪುರುಷಾರ್ಥವನ್ನು ಶಕ್ತಿಶಾಲಿ ಮಾಡಿಕೊಳ್ಳಲು ಯಾವುದಾದರೊಂದು ಜ್ಞಾನಬಿಂದುವನ್ನು ವಿಶೇಷ ರೂಪದಲ್ಲಿ ಬುದ್ಧಿಯಲ್ಲಿ ನೆನಪಿಟ್ಟುಕೊಳ್ಳಿ. ಈಗ ವಿಶೇಷ ಪುರುಷಾರ್ಥ ಮಾಡುವ ಅವಶ್ಯಕತೆಯಿದೆ, ಸಾಧಾರಣ ಪುರುಷಾರ್ಥ ಮಾಡುವ ದಿನಗಳು ಈಗ ಗತಿಸಿಹೋದವು. ಹೇಗೆ ವಿಶೇಷ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡುತ್ತೀರೋ ಹಾಗೆಯೇ ಈಗ ಸಮಯ ಕಡಿಮೆಯಿದೆ ಎಂದು ತಿಳಿದು ವಿಶೇಷ ಪುರುಷಾರ್ಥದ ಕಾರ್ಯಕ್ರಮಗಳನ್ನೂ ಇಟ್ಟುಕೊಂಡು ವಿಶೇಷ ಪುರುಷಾರ್ಥ ಮಾಡುವ ಉದ್ದೇಶದಿಂದ ಮುಂದುವರೆಯಿರಿ ಒಂದು ವೇಳೆ ಹೀಗೆ ಕಡಿಮೆ ಫಲಿತಾಂಶವಿದ್ದರೆ ಬರಲಿರುವ ಪರೀಕ್ಷೆಗಳಲ್ಲಿ ಫಲಿತಾಂಶವೇನಾಗುವುದು? ಕಠಿಣ ಪರೀಕ್ಷೆಗಳು ಬರಲಿವೆ. ಅವುಗಳನ್ನು ಎದುರಿಸಲು ಕಠಿಣ ಪುರುಷಾರ್ಥ ಬೇಕು. ಪುರುಷಾರ್ಥ ಸಾಧಾರಣ, ಪರೀಕ್ಷೆ ಕಠಿಣವಾದರೆ ಪರಿಣಾಮವೇನಾಗುವುದು?

ಒಳ್ಳೆಯದು, ಇಂದು ಗೋಪರನ್ನು ಭೇಟಿಯಾಗುತ್ತೇವೆ. ತಮ್ಮ ಪುರುಷಾರ್ಥದಲ್ಲಿ ಸಂತುಷ್ಟರಾಗಿದ್ದೀರಾ? ಮುಂದುವರೆಯುತ್ತಿದೀರಿ ಆದರೆ ಎಷ್ಟು ಪ್ರತಿಶತದಲ್ಲಿ? ಯಾರು 75% ಶ್ರೀಮತದಂತೆ ನಡೆಯುತ್ತಿದ್ದೀರಿ ಕೈ ಎತ್ತಿ. (ಕೆಲವರು ಕೈ ಎತ್ತಿದರು) ಒಳ್ಳೆಯದು ಮುಖ್ಯ ಶ್ರೀಮತ ಯಾವುದು? ಮುಖ್ಯ ಶ್ರೀಮತವಾಗಿದೆ ಅತೀ ಹೆಚ್ಚು ಸಮಯ ನೆನಪಿನ ಯಾತ್ರೆಯಲ್ಲಿರುವುದು. ಏಕೆಂದರೆ ಈ ನೆನಪಿನ ಯಾತ್ರೆಯಿಂದಲೇ ಪವಿತ್ರತೆ, ದೈವೀಗುಣ ಮತ್ತು ಸೇವೆಯಲ್ಲಿ ಸಫಲತೆ ಸಿಗುವುದು, ಯಾರು 75% ಶ್ರೀಮತದಂತೆ ನಡೆಯುತ್ತಾರೋ ಅವರ ನೆನಪಿನ ಚಾರ್ಟ್ ಹೇಗಿದೆ? ನೆನಪಿನ ಚಾರ್ಟ್ ಕೂಡ 75% ಇರಬೇಕು. ಇವರನ್ನು ಪೂರ್ಣ ಶ್ರೀಮತದಂತೆ ನಡೆಯುವವರು ಎಂದು ಹೇಳಲಾಗುವುದು. ಇಂದು ವಿಶೇಷವಾಗಿ ಗೋಪರನ್ನು ಮುಂದೆ ಕರೆಯಲಾಗಿದೆ. ಗೋಪಿಯರನ್ನು ನಂತರ. ಏಕೆಂದರೆ ಯಾವಾಗಲೂ ಮಿಲನದ ಯಾವುದೇ ಮಾತಿದ್ದರೂ ಗೋಪಿಯರು ಬೇಗನೇ ಬರುತ್ತಾರೆ, ಗೋಪರು ನೋಡುತ್ತ ನಿಲ್ಲುತ್ತಾರೆ. ಗೋಪರಿಗೆ ಜವಾಬ್ದಾರಿಯನ್ನೂ ಕೊಡಬೇಕಾಗಿದೆ. ದ್ವಾಪರದ ನಂತರ ಕಿರೀಟ ತೆಗೆಯಲಾಗುತ್ತದೆ ಎಂದು ತಮ್ಮ ಚಿತ್ರದಲ್ಲಿ ತೋರಿಸಲಾಗಿದೆ. ಜವಾಬ್ದಾರಿಯ ಕಿರೀಟವನ್ನು ಕೊಡಲಾಗಿದೆ, ಆದರೆ ಒಮ್ಮೊಮ್ಮೆ ಬೇಕೆಂದೇ ಕಿರೀಟವನ್ನು ಹಾಗೆಯೇ ಇಳಿಸುತ್ತೀರಿ ಮತ್ತು ಮಾಯೆಯೂ ಇಳಿಸಿಬಿಡುತ್ತದೆ. ಸತ್ಯಯುಗದಲ್ಲಿ ತಲೆಯ ಮೇಲೆ ಸ್ವಲ್ಪ ಭಾರವಿದೆ ಎಂದು ಗೊತ್ತೇ ಆಗದಿರುವಷ್ಟು ಕಿರೀಟ ಹಗುರವಾಗಿರುತ್ತದೆ. ಸತ್ಯಯುಗದ ದೃಶ್ಯಾವಳಿಗಳು ಕಣ್ಮುಂದೆ ಬರುತ್ತವೆಯೋ? ತಾವಾಗಿಯೇ ಬರುತ್ತವೆಯೋ ಅಥವಾ ಕಣ್ಮುಂದೆ ತರಬೇಕಾಗುತ್ತದೆಯೋ? ಎಷ್ಟೆಷ್ಟು ಮುಂದುವರೆಯುವಿರೋ ಅಷ್ಟು ಇಚ್ಛೆಯಿಲ್ಲದಿದ್ದರೂ ಸತ್ಯಯುಗದ ದೃಶ್ಯಗಳು ಸ್ವತಃ ಎದುರಿಗೆ ಬರುವವು, ತರುವ ಅವಶ್ಯಕತೆಯಿಲ್ಲ. ಎಷ್ಟೆಷ್ಟು ಸಮೀಪ ಬರುವಿರೋ ಅಷ್ಟಷ್ಟು ಸಮೀಪವಾಗುವವು.

ಸತ್ಯಯುಗಕ್ಕೆ ಹೋಗಬೇಕು ಮತ್ತು ಆಟೋಟಗಳನ್ನು ಮಾಡಬೇಕು. ಇದು ನಿಶ್ಚಿತವಾಗಿದೆ. ಮೊದಲ ಈ ಸಭೆಯಲ್ಲಿ ಇಂದು ಇಲ್ಲಿ ಕುಳಿತವರಲ್ಲಿ ಯಾರು ಶ್ರೀ ಕೃಷ್ಣನ ಜೊತೆಗೆ ಜನ್ಮದಲ್ಲಿ ಬರುತ್ತೇವೆಂದು ತಿಳಿಯುತ್ತೀರಿ? ಅವರ ಪರಿವಾರದಲ್ಲಿ ಬರುವೆವು ಅಥವಾ ಸಖಿ/ಸಖಾ ಆಗುತ್ತೇವೆ ಅಥವಾ ಶಾಲೆಯಲ್ಲಿ ಸಹಪಾಠಿಯಾಗುತ್ತೇವೆ? ಈ ಮೂರರಲ್ಲಿ ಏನಾದರೊಂದು ಅವಶ್ಯವಾಗಿ ಆಗುತ್ತೇವೆಂಬ ನಿಶ್ಚಯ ಬುದ್ಧಿಯವರು ಯಾರಾಗಿದ್ದೀರಿ? (ಎಲ್ಲರೂ ಕೈ ಎತ್ತಿದರು) ಸಂಗಮಯುಗದಲ್ಲಿ ಸಮೀಪ ಬರುವವರ ಲಕ್ಷಣಗಳೇನು? ಇಲ್ಲಿ ಯಾರು ತಾವು ಸಮೀಪದವರು ಎಂದು ತಿಳಿದಿರುವಿರಿ? ಯಜ್ಞ ಸೇವೆಯಲ್ಲಿ ಅಥವಾ ಬಾಪ್ ದಾದಾರವರ ಕಾರ್ಯದಲ್ಲಿ ಯಾರು ಸಮೀಪದಲ್ಲಿರುವರೋ ಅವರೇ ಆಟೋಟಗಳಲ್ಲಿ ಅಲ್ಲಿ ಸಮೀಪವಿರುವರು. ಯಜ್ಞದ ಜವಾಬ್ದಾರಿ ಅಥವಾ ಬಾಪ್ ದಾದಾರವರ ಕಾರ್ಯದ ಜವಾಬ್ದಾರಿಗೆ ಎಷ್ಟು ಸಮೀಪದಲ್ಲಿರುವರೋ ಅಷ್ಟೆ ಅಲ್ಲಿಯೂ ಸಮೀಪದಲ್ಲಿರುವರು, ಸಮೀಪವಿರುವ ಪರಿಶೀಲನೆ ಹೇಗೆ ಮಾಡುವುದು? ತಮ್ಮ ಬುದ್ಧಿ, ತನು-ಮನ-ಧನ ಮತ್ತು ಸಮಯ ಲೌಕಿಕ ಜವಾಬ್ದಾರಿಗಳಿಗೆ ಎಷ್ಟು ಕೊಡುತ್ತೀರೋ ಅಷ್ಟೇ ಇದಕ್ಕೂ ಕೊಡುತ್ತೀರಾ ಎಂದು ಪ್ರತಿಯೊಬ್ಬರೂ ತಮಗೆ ತಾವೇ ಕೇಳಿಕೊಳ್ಳಬೇಕು. ಇತ್ತ ಕಡೆಗೆ ಜಾಸ್ತಿ ಕೊಡಬೇಕು. ಒಂದು ವೇಳೆ ಹೆಚ್ಚು ಇಲ್ಲದಿದ್ದರೂ ಎರಡೂ ಸರಿಸಮವಾಗಿವೆಯಾ ಎಂಬ ಲೆಕ್ಕದಿಂದ ತಮ್ಮನ್ನು ತಾವು ಪರಿಶೀಲಿಸಿ. ಒಂದು ವೇಳೆ ಸಮಾನವಾಗಿದ್ದರೂ ಸಮೀಪದವರೆಂದು ಪರಿಗಣಿಸಲಾಗುತ್ತದೆ. ಇಲ್ಲಿಯವರೆಗಿನ ಫಲಿತಾಂಶದಲ್ಲಿ ಲೌಕಿಕ ಜವಾಬ್ದಾರಿಗಳ ಹೊರೆ ಜಾಸ್ತಿ ಕಂಡುಬರುತ್ತದೆ. ವಿಶೇಷವಾಗಿ ಗೋಪರು ಈ ಮಾತುಗಳನ್ನು ಅವಶ್ಯವಾಗಿ ಗಮನದಲ್ಲಿಟ್ಟುಕೊಂಡು ಈ ದಿನ ಏನು ಕಳೆಯಿತೋ ಅದರಲ್ಲಿ ಲೌಕಿಕ ಜವಾಬ್ದಾರಿಗೆ ಹಾಗೂ ಅಲೌಕಿಕ/ಪಾರಲೌಕಿಕ ಜವಾಬ್ದಾರಿಗೆ ಎಷ್ಟು ಸಮಯ ಕೊಡಲಾಯಿತು? ಎಷ್ಟು ಸಹಯೋಗಿಗಳಾದೆವು? ಎಂದು ಪರಿಶೀಲನೆ ಮಾಡುತ್ತಿದ್ದರೆ ಯಾವ ಕಡೆಗೆ ಖಾಲಿಯಿದೆಯೆಂದು ಗೊತ್ತಾಗುವುದು. ಎಲ್ಲಾ ಪ್ರಕಾರದ ಪರಿಸ್ಥಿತಿಗಳಲ್ಲಿರುತ್ತಿದ್ದರೂ ಅತೀ ಕಡಿಮೆಯೆಂದರೆ ಎರಡೂ ಕಡೆಗೂ ಒಂದೇ ಸಮನಾಗಿರಬೇಕು. ಆ ಕಡೆಗೆ ಕಡಿಮೆಯಾದರೆ ಪರವಾಗಿಲ್ಲ. ಆದರೆ ಈ ಕಡೆಗೆ ಕಡಿಮೆಯಾಗಬಾರದು, ಆಗ ಲೌಕಿಕ ಜವಾಬ್ದಾರಿಯ ಕೊರತೆಯನ್ನು ಸರಿಪಡಿಸಬಹುದು. ಪರಮಾರ್ಥದಿಂದ ವ್ಯವಹಾರವೂ ಸಿದ್ಧವಾಗುವುದು. ಮೊದಲು ವ್ಯವಹಾರವನ್ನು ಸರಿಪಡಿಸಿಕೊಂಡು ಪರಮಾರ್ಥ ಮಾಡುವುದೆಂದು ಕೆಲವರು ಹೇಳುತ್ತಾರೆ. ಇದು ಸರಿಯಲ್ಲ. ಆದ್ದರಿಂದ ವಿಶೇಷ ಗಮನ ಈ ಮಾತಿನ ಕಡೆಗಿರಲಿ. ವಿಶೇಷವಾಗಿ ಗೋಪರಲ್ಲಿ ಬಾಪ್ ದಾದಾರವರ ಭರವಸೆಗಳಿವೆ. ಅವುಗಳನ್ನು ಅವರೇ ಪೂರ್ಣಮಾಡಬಲ್ಲರು. ಗೋಪಿಯರಿಂದ ಆಗುವುದಿಲ್ಲ. ಅವು ಯಾವ ಭರವಸೆಗಳು? ಅನೇಕ ಪ್ರಕಾರದ ಜನ ಮತ್ತು ಪರೀಕ್ಷೆಗಳು ಸಮಯಾನುಸಾರ ಬರಲಿವೆ ಮತ್ತು ಬರುತ್ತಿರುತ್ತವೆ. ಆಗ ಅವುಗಳ ಪರಿಶೀಲನೆಯ ಮುಖ್ಯ ಕಾರ್ಯ ಪಾಂಡವರದಾಗಿದೆ. ಏಕೆಂದರೆ ಶಕ್ತಿಯರ ರಕ್ಷಣೆಯ ಮುಖ್ಯ ಕಾರ್ಯ ಪಾಂಡವರದು. ಶಕ್ತಿಯರ ಕೆಲಸ ಬಾಣ ಬಿಡುವುದು ಆದರೆ ಎಲ್ಲ ಪ್ರಕಾರದ ಪರೀಕ್ಷೆ ಮತ್ತು ಜನರ ಪರಿಶೀಲನೆ ಮತ್ತು ಶಕ್ತಿಯರ ರಕ್ಷಣೆ ಮಾಡುವುದು ಪಾಂಡವರ ಕೆಲಸವಾಗಿದೆ. ಈ ಜವಾಬ್ದಾರಿ ತೆಗೆದುಕೊಳ್ಳಲಾಗುತ್ತದೆಯೇ? ತಮಗೆ ಶಕ್ತಿಯರ ರಕ್ಷಣೆಯ ಅವಶ್ಯಕತೆಯಿದೆಯೇ? ಪಾಂಡವರು ತಮ್ಮ ರಕ್ಷಣೆಯನ್ನು ಬೇರೆಯವರಿಂದ ಅಪೇಕ್ಷಿಸುತ್ತಾರೆ ಎಂಬುದು ಅಲ್ಲಲ್ಲಿ ಕಂಡು ಬರುತ್ತದೆ ಆದರೆ ಪಾಂಡವರಿಗೆ ತಮ್ಮದರ ಜೊತೆಗೆ ನಾಲ್ಕೂ ಕಡೆಗಳ ರಕ್ಷಣೆ ಮಾಡಬೇಕು. ಹದ್ದಿನದಲ್ಲ, ಬೇಹದ್ದಿನ ದೃಷ್ಟಿಯಿರಬೇಕು. ಒಂದು ವೇಳೆ ತಮ್ಮದೇ ರಕ್ಷಣೆ ಮಾಡಿಕೊಳ್ಳದಿದ್ದರೆ ಬೇರೆಯವರನ್ನು ರಕ್ಷಿಸುವುದು ಕಠಿಣವಾಗುತ್ತದೆ. ಒಳ್ಳೆಯದು.

ಅವ್ಯಕ್ತ ಮುರಳಿ 09-06-1969

***ಸುಸ್ತಿನ ಮಧುರ ರೂಪ ಆಲಸ್ಯ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಸದಾ ಅವ್ಯಕ್ತ ಸ್ಥಿತಿಯಲ್ಲಿರುವ ಅವ್ಯಕ್ತ ಫರಿಶ್ತಾ.

2. ನಾನು ಪುರುಷಾರ್ಥದ ಸೆಳೆತ ಸದಾ ಇಟ್ಟುಕೊಳ್ಳುವ ತೀವ್ರ ಪುರುಷಾರ್ಥಿ.

3. ನನ್ನ ಎದುರಿಗೆ ಬರುವ ಪ್ರತಿಯೊಂದು ಪರೀಕ್ಷೆಗಿಂತ ನನ್ನ ಪುರುಷಾರ್ಥವೇ ಕಠಿಣವಾಗಿ ಇದೆ.

4. ನನ್ನ ಪುರುಷಾರ್ಥದೊಂದಿಗೆ ನಾನು ಸಂತುಷ್ಟವಾಗಿ ಇದ್ದೇನೆ.

5. ನಾನು ಸದಾ ಸ್ಮೃತಿ ಯಾತ್ರೆಯಲ್ಲಿ ಇದ್ದು ಪವಿತ್ರತೆ, ದೈವಿ ಗುಣಗಳು ಮತ್ತು ಸೇವೆಯಲ್ಲಿ ಸಫಲತೆಯನ್ನು ಹೊಂದಿದ್ದೇನೆ.

6. ನಾನು ಸೇವೆ ಮತ್ತು ಸ್ಮೃತಿಯ ಸಮಾನ ಸ್ವರೂಪ.

7. ನಾನು ರುದ್ರ ಜ್ಞಾನ ಯಜ್ಞದ ಜವಾಬ್ದಾರಿ ಕಿರೀಟಧಾರಿ.

8. ನಾನು ಇಲ್ಲಿ ತಂದೆಯ ಕರ್ತವ್ಯದಲ್ಲಿ ಸಮೀಪವಾಗಿ ಇದ್ದು ಸತ್ಯಯುಗದಲ್ಲಿಯೂ ಶ್ರೀ ಕೃಷ್ಣನ ಸಮೀಪ ಸಂಬಂಧದಲ್ಲಿ ಜನ್ಮ ತೆಗೆದುಕೊಳ್ಳುವ ಫಸ್ಟ್ ಡಿವಿಷನ್ ಗೆ ಅಧಿಕಾರಿ.

9. ನಾನು ಲೌಕಿಕ ಮತ್ತು ಅಲೌಕಿಕ ವ್ಯವಹಾರಗಳನ್ನು ಸಮಾನವಾಗಿ ನೋಡಿಕೊಳ್ಳುತ್ತಿದ್ದೇನೆ.

10. ನಾನು ಬೇಹದ್ ದೃಷ್ಟಿಯಿಂದ ನನ್ನನ್ನು ನಾನು ರಕ್ಷಿಸಿಕೊಳ್ಳುವುದರೊಂದಿಗೆ ನಾಲ್ಕು ಕಡೆ ಇರುವ ಎಲ್ಲರನ್ನೂ, ಪ್ರಕೃತಿಯನ್ನು ರಕ್ಷಿಸುವ ಪಾಂಡವ ಸ್ವರೂಪ.